ಪ್ರಕೃತಿ ಪುರುಷ ಸಮಾಗಮವೋ ಸಮನ್ವಯವೋ ಅಲ್ಲ. ಇಲ್ಲಿರುವುದು ಪ್ರಕೃತಿ – ಪ್ರಕೃತಿಯ ಸಮನ್ವಯವೇ. ಕವಿಗೆ ಮನುಷ್ಯ ಕೂಡ ಪ್ರಕೃತಿಯದೇ ಒಂದಂಶ. ಬೇರಿನಿಂದ ಹಿಡಿದು ತಾರೆಯವರೆಗೆ ಎಲ್ಲವೂ ಒಳಗೊಂಡಿರುವ ಇಡೀ ಪ್ರಕೃತಿಯೇ ಮಂಜುನಾಥ್ ಅವರಿಗೆ ಇಹವೂ ಪರವೂ ಆಗಿ ದಕ್ಕಿಸಿದ ದರ್ಶನ, ಮಗುವಿನ ಕೌತುಕದಿಂದ ಅದನ್ನು ನಿರುಕಿಸುತ್ತ ನಿಂತ ಅವರ ವಿಸ್ಮಯ, ಸತ್ಯದ ಕ್ಷಣಭಂಗುರ ಹೊಳಹುಗಳನ್ನೊದಗಿಸಿದ ಅದು ಅವರಲ್ಲಿ ಅರಳಿಸಿದ ಸೋಜಿಗ ಅವರ ಕವಿತೆ. ಇದು ಮಂಜುನಾಥ್ ಅವರ ಜೀವನದೃಷ್ಟಿ, ಕಾವ್ಯಧಾರೆಯ ಮೂಲ ಸ್ರೋತ. ಈ ಸಂಕಲನದ ಎಪ್ಪತ್ತೆರಡನೆಯ ಪುಟದಲ್ಲಿ ಇದನ್ನೇ ಅವರು ಸೂಚ್ಯವಾಗಿ ವಿವರಿಸುತ್ತಾರೆ.

ಮಂಜುನಾಥರ ಹೆಚ್ಚಿನ ಎಲ್ಲ ಕವಿತೆಗಳನ್ನೂ ನಾವು ಈ ನೆಲೆಯಲ್ಲಿ ಮುಖಾಮುಖಿಯಾಗುವುದು ಸಾಧ್ಯವಿದೆ. ಅವರ 'ಕೆಸರು ಗದ್ದೆ ಬೆಳಗು' ಕವಿತೆ ಇದನ್ನು ಅನನ್ಯವಾಗಿ ಹಿಡಿದಿಟ್ಟಿರುವ ಬೆರಗು ಗಮನಿಸಿ:

ಕೆಸರು ಗದ್ದೆಗೆ ಬಿದ್ದ ಬೆಳಗಿನ ಸೂರ್ಯ
ಮಳಮಳ ಹರಿದಿದೆ ಆವನೆದೆ ಮೇಲೆ ನಾಲೆ ಜಲ
ಮಣ್ಣ ಹೆಂಟೆಗಳೊಡನೆ ಬೆಡಗಿನ ಮೋಡ
ಕಲೆತು, ಹರಡುತಿರುವಂತಿದೆ ನಸು ಗುಲಾಲ
ಖುಶಿಯಲ್ಲಿ ಅಡ್ಡಾಡಿ ಏರೋಪ್ಲೇನು ಚಿಟ್ಟೆ
ಹೊಲೆಯುತಿದೆ ಹೊಸ ಕೌದಿ ಬಟ್ಟೆ

ಬಿತ್ತಿ ಬೆಳೆಯುವುದು ಆವನನ್ನೇ ಎನ್ನೋ ಹಾಗೆ
ಬೆರಗಾಗಿ ನಿಂತು ಒಕ್ಕಲಿಗನಿರಲು
ಸುಮ್ಮಗಿದೆ ಗುದ್ದಲಿ ಕಾಲ ಬುಡಕೆ

ಆರಿದವೆ ತಾರೆಗಳು ಇಳೆಯೊಳಗೆ ಊರಿ
ಕೂಳೆಗಳೆ ಮೇಲೆ ನೆಗೆಯಲೆಳಸಿ
ಎಂಥ ರೆಕ್ಕೆಯೂ ಇರದೆ ನಾಚಿ!
ಹಾರಿ ಹೊರಟಿದೆ ಒಂಟಿ ಕಾಗೆ ಮಾತ್ರ
ಗದ್ದೆ ತೆವರಿಂದಾಚೆ
ನೆಲದ ಬಿಚ್ಚಿದ ಕೊಡೆ ಆ ಬಾನಿನಲ್ಲಿ

ಹಾಗೆಯೇ ಮಂಜುನಾಥ್ ಅವರು ಈ ಸಂಕಲನದಲ್ಲಿ ಕೆಲವೊಂದು ವ್ಯಕ್ತಿಚಿತ್ರಗಳನ್ನೂ, ಊರಿನ ಚಿತ್ರಗಳನ್ನೂ ಕಟ್ಟಿಕೊಡುತ್ತಾರೆ. ನೆಳಲು–ಬೆಳಕು, ಸತ್ಯ–ಮಿಥ್ಯದ ಜಿಜ್ಞಾಸೆಗಳನೆತ್ತುತ್ತಾರೆ. ಒಂದು ಪುಟ್ಟ ಇರುವೆ ಮನುಷ್ಯನ ಇರವು–ಅಳಿವಿನ ದರ್ಶನ ಕರುಣಿಸುವ ಚಿತ್ರ ಕೊಡುತ್ತಾರೆ. ದೇಹದ ಉಸಿರು ಕಿರುಬೆರಳ ಉಸಿರೂ ಆಗಿರುವುದನ್ನು ಕಾಣಿಸುತ್ತಲೇ ಮಗುವಾಗಿದ್ದಾಗ ಪರಮಹಂಸರನ್ನು ಎತ್ತಿ ಆಡಿಸಿದ ಕುಟುಂಬದ ಮೂರು ನಾಲ್ಕನೆಯ ತಲೆಮಾರಿನ ಒಬ್ಬರ ಸ್ಪರ್ಶ ಸಂಭ್ರಮ ವರ್ಣಿಸುತ್ತಾರೆ. ಕುವೆಂಪು, ಬೇಂದ್ರೆ, ಪುತಿನ ಬರುತ್ತಾರೆ. ಧಾರವಾಡ, ಯದುಗಿರಿ ಇಲ್ಲಿ ಬಂದು ಹೋಗುತ್ತವೆ. ನಿಜವಾದ ಚೆಲುವಿನ ಅಂತಿಮ ಸತ್ಯದ ಬಗ್ಗೆ, ಮನುಕುಲದ ಕ್ಷೇಮ, ಶಾಂತಿಯ ಕನಸೆಲ್ಲ